# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1185 |
| 2 | ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ |
| 3 | ಉತ್ತರಿಸಬೇಕಾದ ದಿನಾಂಕ | : | 20.12.2018 |
| 4 | ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು, |

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>371(ಜೆ) ಅನ್ವಯ ಅಸ್ತಿತ್ವಕ್ಕೆ ಬಂದಿರುವ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಹೆಚ್.ಕೆ.ಡಿ.ಬಿ)ಗೆ ಇದುವರೆಗೂ ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ಅನುದಾನ ಎಷ್ಟು; ಬಿಡುಗಡೆಯಾಗಿರುವ ಹಣ ಎಷ್ಟು; ಖರ್ಚಾಗಿರುವ ಮೊತ್ತ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>2013-14 ರಿಂದ 2018-19ನೇ ಸಾಲಿನ ವರೆಗೆ ಸರ್ಕಾರದಿಂದ ಆಯವ್ಯಯದಲ್ಲಿ ನಿಗದಿಪಡಿಸಿರುವ, ಬಿಡುಗಡೆಯಾದ, ಮತ್ತು ಖರ್ಚಾಗಿರುವ, ಅನುದಾನದ ವಿವರಗಳು ಈ ಕೆಳಕಂಡಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರ ಸಂ.</th><th>ವರ್ಷ</th><th>ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನ</th><th>ಬಿಡುಗಡೆಯಾದ ಅನುದಾನ</th><th>ಖರ್ಚಾದ ಅನುದಾನ</th></tr>
<tr><td>1</td><td>2013-14</td><td>153.50</td><td>30.00</td><td>26.66</td></tr>
<tr><td>2</td><td>2014-15</td><td>600.00</td><td>300.00</td><td>322.59</td></tr>
<tr><td>3</td><td>2015-16</td><td>1000.00</td><td>750.00</td><td>493.66</td></tr>
<tr><td>4</td><td>2016-17</td><td>1000.00</td><td>750.00</td><td>960.02</td></tr>
<tr><td>5</td><td>2017-18</td><td>1000.00</td><td>800.00</td><td>355.29</td></tr>
<tr><td>6</td><td>2018-19 (ನವೆಂಬರ್ - 2018)</td><td>1000.00</td><td>750.00</td><td>693.03</td></tr>
</table>
2013-14 ನೇ ಸಾಲಿನಿಂದ 2018-19 ನೇ ಸಾಲಿನವರೆಗೂ ಮಂಡಳಿಯಿಂದ ಕಲಬುರಗಿ ಜಿಲ್ಲೆಗೆ ರೂ. 1160.23 ಕೋಟಿ, ಬೀದರ್ ಜಿಲ್ಲೆಗೆ ರೂ. 384.08 ಕೋಟಿ, ಯಾದಗಿರಿ ಜಿಲ್ಲೆಗೆ ರೂ. 308.47 ಕೋಟಿ, ರಾಯಚೂರು ಜಿಲ್ಲೆಗೆ ರೂ. 383.78 ಕೋಟಿ, ಕೊಪ್ಪಳ ಜಿಲ್ಲೆಗೆ ರೂ. 330.28 ಕೋಟಿ ಹಾಗೂ ಬಳ್ಳಾರಿ ಜಿಲ್ಲೆಗೆ ರೂ. 284.38 ಕೋಟಿ ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.</td></tr>
<tr><td>ಆ)</td><td>ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನ ಸಂಪೂರ್ಣವಾಗಿ ಆಯಾ ವರ್ಷದಲ್ಲಿ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕಾರಣವೇನು; (ಮಾಹಿತಿ ನೀಡುವುದು)</td><td>ಸಾಮಾನ್ಯವಾಗಿ ಆರ್ಥಿಕ ಇಲಾಖೆಯು ತ್ರೈಮಾಸಿಕ ಕಂತಿನಲ್ಲಿ ಅನುದಾನವನ್ನು ಬಿಡುಗಡೆಗೊಳಿಸುತ್ತಿದ್ದು, ಒಟ್ಟು ಬಿಡುಗಡೆಯಾದ ಮೊತ್ತದ ಶೇಕಡ 75ರಷ್ಟು ವೆಚ್ಚವಾಗಿದ್ದಲ್ಲಿ ಮುಂದಿನ ಕಂತುಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿ ಸರ್ಕಾರದಿಂದ ಬಿಡುಗಡೆಗೊಳಿಸಿದ ಅನುದಾನಕ್ಕೆ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಮಾಡುವ ವೆಚ್ಚವನ್ನಾಧರಿಸಿ ಹಣ ಬಿಡುಗಡೆಗೊಳಿಸಲಾಗಿರುತ್ತದೆ.</td></tr>
</table>

| | ಪ್ರಶ್ನೆ | ಉತ್ತರ |
|---|---|---|
| ಇ) | ಪ್ರಸಕ್ತ ಸಾಲಿನಲ್ಲಿ 1500 ಕೋಟಿ ರೂ ಬದಲಾಗಿ 1000 ಕೋಟಿ ರೂ ಮಾತ್ರ ಆಯವ್ಯಯದಲ್ಲಿ ಕಾಯ್ದಿರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದಕ್ಕೆ ಕಾರಣವೇನು; (ಮಾಹಿತಿ ನೀಡುವುದು) | ಸಾಮಾನ್ಯವಾಗಿ ಮುಂದಿನ ವರ್ಷದ ಆಯವ್ಯಯದ ಅಂದಾಜು ತಯಾರಿಸುವ ಸಂದರ್ಭದಲ್ಲಿ ಆರ್ಥಿಕ ಇಲಾಖೆಯು ಹಿಂದಿನ ವರ್ಷಗಳಲ್ಲಿ ಬಿಡುಗಡೆಗೊಳಿಸಿದ ಅನುದಾನಕ್ಕೆ ವೆಚ್ಚ ಮಾಡುವ ಸಾಮರ್ಥ್ಯವನ್ನು ಪರಿಗಣಿಸಿ ಮುಂದಿನ ಆರ್ಥಿಕ ವರ್ಷದಲ್ಲಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸುತ್ತದೆ. ಇದರಿಂದ ಸರ್ಕಾರದ ಸಂಪನ್ಮೂಲವು ಸಮರ್ಪಕವಾಗಿ ಬಳಕೆಯಾಗುತ್ತದೆ. ಈ ಹಿನ್ನಲೆಯಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಲಿಗೆ ಪ್ರಸಕ್ತ ಸಾಲಿನಲ್ಲಿ ರೂ.1000.00 ಕೋಟಿಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿರುತ್ತದೆ. |
| ಈ) | ಮಂಡಳಿ ಅಸ್ಥಿತ್ವಕ್ಕೆ ಬಂದಾಗಿನಿಂದ ಇಲ್ಲಿಯವರೆಗೂ ಎಷ್ಟು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ; ಅವುಗಳ ಪೈಕಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; ಬಾಕಿ ಉಳಿದಿರುವ ಕಾಮಗಾರಿಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | 2013-14 ನೇ ಸಾಲಿನಿಂದ 2018-19 ನೇ ಸಾಲಿನವರೆಗೂ ಒಟ್ಟು 17722 ಕಾಮಗಾರಿಗಳಿಗೆ ಮಂಜೂರಾತಿ ನೀಡದ್ದು, 9328 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 3095 ಕಾಮಗಾರಿಗಳು ಪ್ರಗತಿಯಲ್ಲಿದ್ದು, 5299 ಕಾಮಗಾರಿಗಳು ವಿವಿಧ ಹಂತದ ಅನುಷ್ಠಾನದಲ್ಲಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |

**ಸಂಖ್ಯೆ: ಯೋಇ 110 ಹೈಕವಿ 2018**

**( ಹೆಚ್.ಡಿ.ಕುಮಾರಸ್ವಾಮಿ)**

**ಮುಖ್ಯಮಂತ್ರಿ**

ಅನುಬಂಧ

## 2017-18 & 2018-19ನೇ ಸಾಲಿನಲ್ಲಿ ಮಂಡಲಿಯಿಂದ ಅನುಮೋದಿಸಿರುವ ಜಿಲ್ಲಾವಾರು ಕಾಮಗಾರಿಗಳ ವಿವರಗಳು

| ಜಿಲ್ಲೆ | ಅನುಮೋದನೆ ಮಾಡಿರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ವಿವಿಧ ಹಂತದಲ್ಲಿರುವ ಕಾಮಗಾರಿಗಳು |
|---|---|---|---|---|
| ಬೀದರ್ | 1605 | 884 | 277 | 444 |
| ಕಲಬುರಗಿ | 5920 | 3366 | 881 | 1673 |
| ಯಾದಗಿರ್ | 2198 | 1075 | 305 | 818 |
| ರಾಯಚೂರು | 2602 | 1146 | 544 | 912 |
| ಕೊಪ್ಪಳ | 2145 | 1285 | 370 | 490 |
| ಬಳ್ಳಾರಿ | 2817 | 1290 | 565 | 962 |
| ಹೈದ್ರಾಬಾದ್ ಕರ್ನಾಟಕ | 435 | 282 | 153 | 0 |
| ಒಟ್ಟು | **17722** | **9328** | **3095** | **5299** |